ಗೊಂದಲ

ಶ್ರೀ ಎ.ಟಿ. ರಾಮಸ್ವಾಮಿ(ಅಧ್ಯಕ್ಷರು ಹಕ್ಕುಭಾದ್ಯತಾ ಸಮಿತಿ):– ಮಾನ್ಯ ಅಧ್ಯಕ್ಷರೆ 2004–05ನೇ ಸಾಲಿನ ವಿಧಾನ ಸಭೆಯ ಹಕ್ಕುಭಾಧ್ಯತಾ ಸಮಿತಿಯ ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು:– ವರದಿಯನ್ನು ಒಪ್ಪಿಸಲಾಯಿತು.

7. ಪ್ರಕಟಣೆ

ಅಧ್ಯಕ್ಷರು: ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಹನ್ನೆರಡನೇ ವಿಧಾನಸಭೆಗೆ ಚುನಾಯಿತರಾಗಿದ್ದ ಶ್ರೀ ಎಸ್.ಎಂ. ಕೃಷ್ಣ ಅವರು ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು ಸದರಿ ರಾಜೀನಾಮೆಯನ್ನು ದಿನಾಂಕ 4ನೇ ಡಿಸೆಂಬರ್ 2004ರಂದು ಅಂಗೀಕರಿಸಲಾಗಿದೆ.

ಈಗ ಸದನವನ್ನು ಮಧ್ಯಾಹ್ನ 3. ಘಂಟೆವರೆಗೆ ಮುಂದೂಡುತ್ತಿದ್ದೇನೆ

(ಸದನವು 2.10ಕ್ಕೆ ಮುಂದೂಡಲ್ಪಟ್ಟು ಮತ್ತೆ 3 ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆಯು ಪುನಃ 3 ಗಂಟೆ 28 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

8. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ತಾವೇ ಅವಕಾಶ ಕೊಡಿಸಿದಂತೆ..

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೆ, ನಿಲುವಳಿ ಸೂಚನೆ ಇದೆ, ಆ ರೀತಿ ಇದ್ದಾಗ ಬೇರೆ ಬಿಸ್‌ನೆಸ್‌ನ್ನು ತೆಗೆದುಕೊಳ್ಳುವುದು ನಿಯಮಾವಳಿಯ ಪ್ರಕಾರ ಸರಿಯಲ್ಲ. ಅದರ ಬಗ್ಗೆ ಏನು ಮಾಡುವುದು? ಇದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ನಮ್ಮ ಯಡಿಯೂರಪ್ಪನವರು...

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ,....

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಪರವಾಗಿಲ್ಲ, ಸರ್ಕಾರ ಎಂದರೆ ಯಾರೋ ಒಬ್ಬರು ಮಂತ್ರಿಗಳು.

ಶ್ರೀ ವಾಟಾಳ್ ನಾಗರಾಜ್:– ಅದಲ್ಲಾ, ಅಧ್ಯಕ್ಷರೇ ಹೇಳುವುದು ಸಾಕು, ಆ ರೀತಿ ಹೇಳಿದ ಮೇಲೆ ಸರ್ಕಾರ ಹೇಳುವುದೇನಿದೆ? ಅಧ್ಯಕ್ಷರು ಹೇಳಿದ ಮೇಲೆ ಮುಗಿಯಿತಲ್ಲಾ? ನಿಮ್ಮನ್ನು ಸರ್ಕಾರ ಅಲ್ಲವೆಂದು ನಾನು ಹೇಳಲೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಾವು ಆ ರೀತಿ ಹೇಳುವುದಿಲ್ಲ, ಆ ವಿಶ್ವಾಸ ನನಗಿದೆ.

ಶ್ರೀ ವಾಟಾಳ್ ನಾಗರಾಜ್:– ಇಲ್ಲಿ ವಿಶ್ವಾಸದ ಪ್ರಶ್ನೆಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಮಾಧುಸ್ವಾಮಿಯವರು, ಯಡಿಯೂರಪ್ಪನವರು, ವಾಟಾಳ್ ನಾಗರಾಜ್‌ರವರು, ಅರಗಜ್ಞಾನೇಂದ್ರರವರುಗಳೆಲ್ಲಾ ತಮಗೆ ನಿಯಮ 60ರ ಮೇರೆಗೆ ರಾಜ್ಯದಲ್ಲಿ ಹಲವಾರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಪ್ರಶ್ನೆ ವಾಸ್ತವಾಂಶ ಇರತಕ್ಕದ್ದು, ನೀರಿನ ಜಲ ಜಾಸ್ತಿಯಾಗದೆ ಇರುವುದರಿಂದಾಗಿ ಕುಡಿಯುವ ನೀರಿನ ತೊಂದರೆ ಇದೆ. ಇದನ್ನು ನಿಲುವಳಿ

ಸೂಚನೆಯಲ್ಲಿ ಪ್ರಸ್ತಾಪ ಮಾಡುತ್ತೇವೆಂದು ತಮಗೆ ಅವರುಗಳು ಈಗಾಗಲೇ ತಿಳಿಸಿದ್ದಾರೆ. ಬೆನ್ನಿಹಿನ್ ಪ್ರಕರಣದ ಬಗ್ಗೆ ಚರ್ಚೆಯಾಗಬಾರದು ಎಂಬುದು ಸರ್ಕಾರದ ನಿಲುವಲ್ಲ. ಚರ್ಚೆಯಾಗಲಿ, ಅದರ ಬಗ್ಗೆ ನಿಮ್ಮ ಅಭಿಪ್ರಾಯಗಳೇನಿದೆ ಅದರ ಬಗ್ಗೆ ಹೇಳಿ, ನಾವು ಭಾಗವಹಿದ್ದ ಕೆಲವರು, ಭಾವಹಿಸದಿದ್ದ ಕೆಲವರು, ನಮ್ಮಲ್ಲೂ ಮಂಜುನಾಥ್‌ರವರದೊಂದು ಅಭಿಪ್ರಾಯವಿದೆ, ಸಿದ್ದರಾಮಯ್ಯನವರದ್ದು ಒಂದು ಅಭಿಪ್ರಾಯವಿದೆ, ನನ್ನದೊಂದು ಅಭಿಪ್ರಾಯವಿದೆ, ಮುಖ್ಯಮಂತ್ರಿಗಳದೊಂದು ಅಭಿಪ್ರಾಯವಿದೆ, ಹೀಗೆ ಅದು ವೈಯಕ್ತಿಕವಾದಂಥ ಅಭಿಪ್ರಾಯಗಳು. ಆದ್ದರಿಂದ ಅದರ ಬಗ್ಗೆ ನಾವು ನಮ್ಮ ಅಭಿಪ್ರಾಯಗಳನ್ನು ಹೇಳುತ್ತೇವೆ, ಅದು ಚರ್ಚೆಯಾಗಲಿ, ಆದರೆ ನಾವು ಈ ಪುಸ್ತಕದ ಪ್ರಕಾರವಾಗಿ ಸದನವನ್ನು ನಡೆಸಬೇಕು ಅವರೇ ಹಿಂದೆಯೂ ವಿರೋಧ ಪಕ್ಷದ ನಾಯಕರಾಗಿದ್ದವರು, ಹಲವಾರು ಬಾರಿ ಆ ಸ್ಥಾನದಲ್ಲಿ ಕುಳಿತುಕೊಂಡು ಕೆಲಸ ಮಾಡಿರತಕ್ಕವರು, ಮೇಲ್ಮನೆಯಲ್ಲೂ ಕೆಲಸ ಮಾಡಿರತಕ್ಕವರು, ಮಾನ್ಯ ವಾಟಾಳ್‌ನಾಗರಾಜ್‌ರವರಂತು ಅತ್ಯಂತ ಹಿರಿಯ ಸದಸ್ಯರು, ಅವರು 1997ರಲ್ಲಿ ಈ ಸದನವನ್ನು ಪ್ರವೇಶ ಮಾಡಿರತಕ್ಕವರು, ಆದ್ದರಿಂದ ಈ ನಿಯಮಾವಳಿ ಸೂಚನೆ ಪ್ರಸ್ತಾವನೆ ತಮ್ಮ ಮುಂದೆ ಇದ್ದಂಥ ಸಂದರ್ಭದಲ್ಲಿ ಬೇರೆಯದನ್ನು ಪ್ರಸ್ತಾಪ ಮಾಡಲು ಅವಕಾಶ ಇದೆಯೇ? It becomes a bad precedent ಒಂದು ಒಳ್ಳೆಯ ಸಂಪ್ರದಾಯವಾಗುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಏಕೆಂದರೆ ನಾವು ಈ ಸದನದಲ್ಲಿ ಬೇರೆಬೇರೆ ಸಂಪ್ರದಾಯಗಳನ್ನು ಹಾಕಿಬಿಟ್ಟರೆ ನಾಳೆ ದಿವಸ ಯಡಿಯೂರಪ್ಪನವರು ಬೇರೆ ವಿಚಾರದಲ್ಲಿ ನಿಲುವಳಿ ಸೂಚನೆಯನ್ನು ಕಳುಹಿಸಿದಾಗ ಇನ್ನೊಬ್ಬರು ಬೇರೆಯದನ್ನು ಪ್ರಸ್ತಾವನೆ ಮಾಡಿದರೆ ಆಗ ಮಾನ್ಯ ಅಧ್ಯಕ್ಷರು ಅವರಿಗೂ ಅವಕಶವನ್ನು ಮಾಡಿಕೊಡಬೇಕಾಗುತ್ತದೆ. ಈ ವಾದ ತಮಗೆ ರುಚಿಸಿತು ಎಂದು ನಾನು ಅಂದುಕೊಂಡಿದ್ದೇನೆ, ಸರ್ಕಾರದ ನಿಲುವು ಇದು, ದಯಮಾಡಿ ತಾವು ನಿಲುವಳಿ ಸೂಚನೆಯಾದಮೇಲೆ ಪರವಾನಗಿಯನ್ನು ಕೊಟ್ಟು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ವಾಟಾಳ್ ನಾಗರಾಜ್‌ರವರು, ಮಾಧುಸ್ವಾಮಿಯವರು ಮತ್ತು ಇತರೆ ಎಲ್ಲಾ ಪಕ್ಷದ ಮುಖಂಡರು ನಿಲುವಳಿ ಸೂಚನೆ ಮೂಲಕ ಕುಡಿಯುವ ನೀರಿನ ಕ್ಷಾಮ ಈ ರಾಜ್ಯದ ಜನ ಎದುರಿಸುತ್ತಿರುವ ಸಂಕಷ್ಟದ ಬಗ್ಗೆ ನಾವು ಕಳುಹಿಸಿದ್ದೇವೆ, ಅದು ಬಹಳ ಮಹತ್ತರವಾದ ವಿಷಯ ಎಂಬ ಬಗ್ಗೆ ಎರಡು ಮಾತಿಲ್ಲ. ಹಿರಿಯ ಸಚಿವರಾದ ಮಾನ್ಯ ಸಿಂಧ್ಯಾರವರಲ್ಲಿ ಕೇಳಲು ಇಚ್ಛೆ ಪಡುವುದೇನೆಂದರೆ, ಯಡಿಯೂರಪ್ಪ ಏನಾದರೂ ಅನಗತ್ಯವಾದಂಥ ಈ ವಿಷಯವನ್ನು ಪಕ್ಕಕ್ಕೆ ಸರಿಸಬೇಕೆಂಬ ದೃಷ್ಟಿಯಿಂದ ಅಲ್ಲ, ಪ್ರತಿ ಪಕ್ಷದ ನಾಯಕನಾಗಿ ನನ್ನ ಜವಾಬ್ದಾರಿ ಜಾಸ್ತಿ ಇದೆ. ಮೊನ್ನೆ ರಾಜ್ಯಪಾಲರ ಭಾಷಣದಲ್ಲೂ ಬಹುಶಃ ನಮ್ಮ ಪಕ್ಷದ ನೀತಿ ಸಂಹಿತೆಗಳು, ನಮ್ಮದೇ ಆದಂಥ ಚೌಕಟ್ಟನ್ನು ಧಾಟಿ ರಾಜ್ಯಪಾಲರ ಕ್ಷಮಾಪಣೆಯನ್ನು ಕೋರಿ ಆ ವಿಷಯವನ್ನು ಪ್ರಸ್ತಾಪ ಮಾಡಿ ತೊಂದರೆ ಮಾಡದೆ ನಾವು ವಾಕೌಟ್ ಮಾಡಿದೆವು. ಈ ಬಾರಿ ನಾವು ನಿರ್ಧಾರ ಮಾಡಿರುವಂಥದ್ದು, ಆ ರೀತಿ ಅನಗತ್ಯ ಅಡ್ಡದಾರಿಗೆ ನಮ್ಮನ್ನು ಇರಿಸಿ ಈ ರಾಜ್ಯದ ಜ್ವಲಂತ ಸಮಸ್ಯೆಗಳನ್ನು ಚರ್ಚೆ ಮಾಡದೆ ಅದಕ್ಕೆ ಅಡ್ಡಿ ಮಾಡಬೇಕು ಎಂದು ಆಡಳಿತ ಪಕ್ಷದ ಯಾರದ್ದಾದರೂ ಮನಸ್ಸಿನಲ್ಲಿ ಇದ್ದರೆ ಅದಕ್ಕೆ ಅವಕಾಶ ಕೊಡದೆಯೇ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ನಾವು ಇಲ್ಲಿ ಬಂದಿರುವುದು. ತಮ್ಮ ಹತ್ತಿರ ನಾನು ಬೆಳಿಗ್ಗೆ ತಮ್ಮ ಅನುಮತಿಯನ್ನು ಕೋರಿ ನಿಂತು ಮಾತನಾಡಿದೆ, ಆ ಸಮಯದಲ್ಲಿ ತಾವೇ ಇದರ ಮಹತ್ವವನ್ನು ಅರ್ಥ ಮಾಡಿಕೊಂಡು

ಪ್ರಶ್ನೋತ್ತರವಾದ ತಕ್ಷಣ ಪ್ರಾರಂಭ ಮಾಡೋಣ ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ, ನಂತರ ನಿಲುವಳಿ ಸೂಚನೆ ಇರುವುದರಿಂದ ಅದಕ್ಕೆ ಆದ್ಯತೆ ಕೊಡಬೇಕು ಎಂಬ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನೀವು ಇದಕ್ಕೆ ಒಂದು ಸಮಯ ನಿಗದಿ ಮಾಡಿ, ಅದಕ್ಕೆ ನನ್ನ ಅಭ್ಯಂತರವೇನಿಲ್ಲ. ನಾವು 79 ಜನ ಶಾಸಕರಿದ್ದು ಈ ಮನೆಯಲ್ಲೇ ದೊಡ್ಡ ಪಕ್ಷವಾಗಿದ್ದರೂ ಕಾನೂನು ಚೌಕಟ್ಟಿನಲ್ಲಿ ನಡೆಯಬೇಕೆಂಬ ಸಾಮಾನ್ಯ ಸಂಗತಿ ನನಗೆ ಗೊತ್ತಿದೆ. ಇವತ್ತು ಪಿ.ಜಿ.ಆರ್. ಸಿಂಧ್ಯಾ ಮಾನ್ಯ ಪ್ರಕಾಶ್ ರವರಂಥ ಹಿರಿಯ ಸಚಿವರಿದ್ದಾರೆ. ಅಲ್ಲಿ ಬೆನ್ನಿಹಿನ್ ಮುಟ್ಟಿದ ತಕ್ಷಣ ಒಬ್ಬ ಸತ್ತು ಹೋದ, ಅದರ ಬಗ್ಗೆ ಕಂಪ್ಲೆಂಟ್ ಆಗಿದೆಯೆ? ಅಕಸ್ಮಾತ್ ಅವನು ಊರು ಬಿಟ್ಟು ಹೊರದೇಶಕ್ಕೆ ಹೊರಟು ಹೋದರೆ ಆಮೇಲೆ ಕರೆದುಕೊಂಡು ಬರುವುದು ಹೇಗೆ? ಇದಲ್ಲದೆ ಸುಪ್ರಿಂಕೋರ್ಟ್ ಸಿಟ್ಟಿಂಗ್ ಜಡ್ಜ್‌ನಿಂದ ಅನೇಕ ಮಾಹಿತಿಗಳನ್ನು ತರಿಸಿಕೊಂಡ ತಕ್ಷಣ ತನಿಖೆ ಪ್ರಾರಂಭವಾಗಬೇಕಾಗಿದೆ. ಅನೇಕ ವಿಷಯಗಳು ಗೌಪ್ಯವಾಗಿರುವಂಥಂದ್ದು ಬಹಿರಂಗವಾಗಿರುವಂಥ ಸಂದರ್ಭ ಇದು, ಮುಗ್ದ ಬಡವರು ದೊಡ್ಡ ದೊಡ್ಡವರೇ ಹೋದಮೇಲೆ ನಾವೂ ಹೋಗಿದ್ದರೆ ಒಳ್ಳೆಯದಾಗುತ್ತದೆನೋ ಎಂಬ ಭ್ರಮೆಯಲ್ಲಿ ಇರುವಂಥದ್ದು. ಮಾನ್ಯ ನರಸಿಂಹಯ್ಯನವರು ಹುಷಾರಿಲ್ಲದೆ ಮಲಗಿದ್ದಾರೆ, ಅವನನ್ನು ಕರೆಸಿಕೊಂಡು ಬಂದು ಮುಟ್ಟಿಸಿ ಅವರನ್ನು ಉಳಿಸಿದ್ದರೆ ನಾನು ಅವನಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದೆ, ಕ್ಯಾನ್ಸರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿನ ರೋಗಿಗಳನ್ನು ವಾಸಿ ಮಾಡಿದ್ದರೆ ನಮಸ್ಕಾರ ಮಾಡುತ್ತಿದ್ದೆ. ಈ ರೀತಿ ಬಡವರಿಗೆ. ಮುಗ್ದರಿಗೆ ಅಡ್ಡದಾರಿ ಇಡುವಂಥ ಕೆಲಸ ಈ ರಾಜ್ಯದಲ್ಲಿ ನಡೆದುಹೋಯಿತಲ್ಲಾ? ನಾವು ತಲೆ ತಗ್ಗಿಸುವಂಥ ಘಟನೆ ನಡೆದು ಹೋಯಿತಲ್ಲಾ? ಯಾವುದೋ ಒಂದು ಕಾರಣಕ್ಕಾಗಿ ಈ ಒಂದು ವ್ಯಾಮೋಹಕ್ಕೆ ಬಲಿಯಾಗಿ ಮಾನ್ಯ ಮುಖ್ಯಮಂತ್ರಿಯವರು ಹೋಗಿ ಬಂದರಲ್ಲಾ? ಮುಖ್ಯಮಂತ್ರಿಗಳು ಹೋಗುವುದಕ್ಕೆ ಸ್ವಾತಂತ್ರ್ಯವಿದೆ. ಆದರೆ, ಅಲ್ಲಿ ಹೋಗಿ ಮಾಡಿದ್ದೇನು? ನಿಮ್ಮ ಮೇಲೆ ಏನು ಪರಿಣಾಮವಾಯಿತು? ಅದರ ಅನುಭವವನ್ನೆಲ್ಲಾ ನಾವು ಹಂಚಿಕೊಳ್ಳಬೇಕಲ್ಲಾ? ಆ ಬಡವ ಮುಟ್ಟಿದ ತಕ್ಷಣ ಲಕ್ಷಾಧೀಶ್ವರವಾಗುವುದಾದರೆ ನಾವೇಕೆ ಇಲ್ಲಿ ಬಡಿದಾಡಬೇಕು, ಪಾಪ ಸಾಲ ಸೋಲ ತಂದು.. ಅವನನ್ನೇ ಕರೆದುಕೊಂಡು ಮುಟ್ಟಿಸಿ ಎಲ್ಲರನ್ನೂ ಅವನು ಹಸ್ತ ಚಾಚಿದ ಕೂಡಲೆ ಲಕ್ಷಾಧೀಶ್ವರರಾಗುವುದಾದರೆ, ಖಂಡಿತ ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಆದರೆ ಹೊರದೇಶದಲ್ಲಿ ಅವನು ಚೀಟ್, ಮೋಸಗಾರ ಎಂದು ಹೇಳಿದಮೇಲೂ ಅನೇಕ ಲೇಖನಗಳು ಬಂದಿದ್ದರೂ ಸಹ...

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಇವರು ಇದರ ನೆಪದಲ್ಲಿ.. ನಿಲುವಳಿ ಸೂಚನೆಯನ್ನು ಕಳುಹಿದವರೂ ಇವರೇ ನಿಲುವಳಿ ಸೂಚನೆ ಕಳುಹಿಸಿದಾಗ ಬೆನ್ನಿಹಿನ್ ವಿಚಾರ ಗೊತ್ತಿರಲಿಲ್ಲವೆ? ದಯವಿಟ್ಟು ತಾವೇ ಹೇಳಿ.

ಶ್ರೀ ಬಿ.ಎಸ್. ಹಡಿಯೂರಪ್ಪ:– ಒಂದು ನಿಮಿಷ, ತಾವು ಹೀಗ ಮಾಡಿ, ನಾನು ಇಲ್ಲಿಗೆ ನಿಲ್ಲಿಸಿಬಿಡುತ್ತೇನೆ, ತಾವು ಹೀಗೆ ಮಾಡಿ, ಇದಕ್ಕೆ ಐದು ಗಂಟೆಯವರೆಗೆ ನಿಗದಿ ಮಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನೀವು ಎಷ್ಟು ಸಮಯ ತೆಗೆದುಕೊಳ್ಳುತ್ತೀರಾ ಅದರ ಮೇಲೆ ಡಿಸೈಡ್ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಲ್ಲ, ನಮ್ಮದು ಬಹಳ ವಿಷಯಗಳಿದೆ, ನಾನು ಬಹಳ ಕಡಿಮೆ ಮಾತನಾಡಬೇಕೆಂದು ಇದ್ದೇನೆ. ನೀವು ಮತ್ತು ನಮ್ಮ ಇತರೆ ಸ್ನೇಹಿತರು ಮಾತನಾಡಿ. ನಿಮ್ಮ ಆದೇಶಕ್ಕೆ ನಾನು ತಲೆಬಾಗುತ್ತೇನೆ. ತಾವು ಹೀಗೆ ಮಾಡಿ,

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):– ನಮಗೆ ಬಹಳ ನೀರನ್ನು ಕುಡಿಸಬೇಡಿ, ಹಾಗಾದರೆ ಇದನ್ನು ಐದು ಗಂಟೆಯವರೆಗೆ ತೆಗೆದುಕೊಳ್ಳಬಹುದು. ಬಹಳ ನೀರು ಕುಡಿಸಿದರೆ ಕಷ್ಟವಾಗುತ್ತದೆ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಷ್ಟು ದೊಡ್ಡ ಮಟ್ಟದಲ್ಲಿ ಅಡ್‌ಜೆಸ್ಟ್‌ಮೆಂಟ್ ಆಗಿರಬೇಕಾಗಿದ್ದರೆ..

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಒಂದು ನಿಮಿಷ ತಾವು ಈಲ್ಡ್ ಆಗುವುದಾದರೆ, ವಿರೋಧ ಪಕ್ಷದ ನಾಯಕರಾದಮೇಲೆ ತಮ್ಮ ಮೇಲೆ ದೊಡ್ಡ ಜವಾಬ್ದಾರಿ ಇರುತ್ತದೆ. ನೀವು ಕೇವಲ ನಿಮ್ಮ ಪಕ್ಷದವರನ್ನು, ಉಪನಾಯಕರನ್ನು, ಸದಸ್ಯರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಲ್ಲ. ಮಾನ್ಯ ಮಾಧುಸ್ವಾಮಿಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ನಿಮ್ಮ ಅಲಯನ್ಸ್ ಪಾರ್ಟನರ್ಸ್ ಅವರು, ಮಾನ್ಯ ವಾಟಾಳ್ ನಾಗರಾಜ್‌ರವರನ್ನು ತೆಗೆದುಕೊಳ್ಳಬೇಕು, ವಿರೋಧ ಪಕ್ಷದಲ್ಲಿ ಯಾರ್ಯಾರು ಇದ್ದಾರೆ ಅವರನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ನೀವು ಈ ನಿಲುವಳಿ ಸೂಚನೆಯನ್ನು ಕಳುಹಿಸಿದಾಗ ಮೂರು ದಿವಸಗಳಿಂದ ಬೆನ್ನಿಹಿನ್ ಕಾರ್ಯಕ್ರಮ ನಡೆಯುತ್ತಿದೆ, ಅದಕ್ಕೆ ನಿಲುವಳಿ ಸೂಚನೆ ಕೊಡಬಹುದಾಗಿತ್ತು, ಒಬ್ಬ ಸತ್ತು ಹೋಗಿದ್ದಾನೆ, ಬೆನ್ನಿಹಿನ್ ದೇಶದಿಂದ ಓಡಿಹೋಗುತ್ತಾನೆ, ಅವನನ್ನು ಅರೆಸ್ಟ್ ಮಾಡಿ ಎಂದು ಅದರ ಬಗ್ಗೆ ಚರ್ಚೆಯಾಗಬೇಕೆಂದು ಹೇಳಬಹುದಿತ್ತಲ್ಲಾ, ಇದನ್ನು ಕಳುಹಿಸಿದವರೂ ನೀವೇ ವಾದ ಮಾಡುತ್ತಿರುವವರೂ ನೀವೇ ಇದು ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ:– ವಿರೋಧ ಪಕ್ಷದವರು ಒಟ್ಟಿಗೆ ಸೇರಿ ನಿಲುವಳಿ ಸೂಚನೆ ಕಳುಹಿಸಿದಾಗ ಮುಖ್ಯಮಂತ್ರಿಗಳು ಹೋಗಿರಲಿಲ್ಲ, ಅವರು ಕೊನೆಯ ಘಳಿಗೆಯವರೆಗೂ ನಾನು ಹೋಗುವುದಿಲ್ಲ, ಆಮಂತ್ರಣ ಬಂದಿಲ್ಲ ಯೋಚನೆ ಮಾಡುತ್ತಿದ್ದೇನೆಂದು ಹೇಳಿದ್ದರು. ತಾವು ಡೇಟ್‌ನ್ನು ನೋಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ತಾವು ಇವತ್ತಿನ ದಿನಾಂಕವನ್ನು ಹಾಕಿ ಕೊಟ್ಟಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವೆಲ್ಲಾ ಒಟ್ಟಾಗಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನೀವು ಒಂದಾಗಿರಿ ಸಂತೋಷ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಪ್ರತಿ ಪಕ್ಷ ಒಂದಾಗಿದ್ದೇವೆ. ನೀವು ಬಹಳಷ್ಟು ದಿವಸ ಅಲ್ಲಿ ಕುರ್ಚಿಯಮೇಲೆ ಕುಳಿತುಕೊಳ್ಳಲು ಆಗುವುದಿಲ್ಲ. ನೀವು ಗಂಟುಮೂಟೆ ಕಟ್ಟಿ ನಿಮ್ಮನ್ನು ಖಾಲಿ ಮಾಡುವ ಕೆಲಸ ಮಾಡುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ತಾವು ಯಾವತ್ತಿನ ದಿನಾಂಕ ಹಾಕಿದ್ದೀರಿ? ಇವತ್ತಿನದ್ದೋ ಅಥವಾ ಬೆನ್ನಿಹಿನ್ ಕಾರ್ಯಕ್ರಮದ ಹಿಂದಿನ ದಿನಾಂಕವೋ? ತಾವೇ ಹೇಳಿ? ಇದನ್ನು ಕಳುಹಿಸಿದ್ದು ಯಾವಾಗ ಎಂದು ತಾವು ದಯವಿಟ್ಟು ಹೇಳಿ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ನಾವೆಲ್ಲಾ ಸೇರಿ ಕಳುಹಿಸಿದ್ದೇವೆ. ಪ್ರಾಮಾಣಿಕವಾಗಿ ಎಲ್ಲವನ್ನೂ ಬದಿಗೊತ್ತಿ ನಿಲುವಳಿ ಸೂಚನೆಯನ್ನು ನೇರವಾಗಿ ತೆಗೆದುಕೊಳ್ಳಬೇಕಾಗಿತ್ತು ಬೆಳಿಗ್ಗೆಯಿಂದ ಅದು ಅಡ್ಡದಾರಿ ಹಿಡಿಯುತ್ತಿದೆ, ಏಕೆ ಆ ರೀತಿ ಹಿಡಿದಿದೆ ಎಂಬುದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು:– ಅಡ್ಡದಾರಿಯನ್ನೇನೂ ಹಿಡಿದಿಲ್ಲ, ನಿಯಮಾವಳಿಯ ಪ್ರಕಾರವೇ ಹೋಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಬೆನ್ನಿಹಿನ್ ಬಗ್ಗೆ ಚರ್ಚೆಯಾಗಲೇ ಬೇಕೆಂದಿದ್ದರೆ ಚರ್ಚೆಯಾಗಲಿ, ಆದರೆ ಇದು ಆದಮೇಲೆ ನಡೆಯಲಿ. ಅವರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ, ಅದನ್ನು ಮಾಡೋಣ. ಈ ಕಡೆ ಏನು, ಆ ಕಡೆ ಏನು, ಮೂಢನಂಬಿಕೆಗಳೇನು, ಅವರು ಕೈ ಹಿಡಿದಿದ್ದೇನು, ಕೈ ತಳ್ಳಿದ್ದೇನು, ಹೋದದ್ದೇನು. ಬಂದದ್ದೇನು, ಅವರ ಕಾಲಿಗೆ ಬಿದ್ದವರು ಯಾರು, ಬೀಳದಿದ್ದವರು ಯಾರು, ಇವೆಲ್ಲವನ್ನೂ ಸಮಗ್ರವಾಗಿ ಒಟ್ಟಾರೆ ಒಂದು ಚರ್ಚೆಯಾಗಲಿ, ಇದು ಚರ್ಚೆಯ ವಸ್ತು. ಆದರೆ ಈಗ ಕುಡಿಯುವ ನೀರು ಅತಿ ಮುಖ್ಯವಾಗಿ ತಾವು ತೆಗೆದುಕೊಳ್ಳಬೇಕು, ಮಾನ್ಯ ವಿರೋಧ ಪಕ್ಷದ ನಾಯಕರಲ್ಲೂ ಕಳಕಳಿಯಿಂದ ಮನವಿ ಮಾಡುತ್ತೇನೆ, ಅದು ಆದ ನಂತರ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಎಷ್ಟೆಷ್ಟು ಚರ್ಚೆಯಾಗಬೇಕೊ ಅದೆಲ್ಲಾ ಆಗಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ ಇದಕ್ಕ ಮಹತ್ವ ಹೋಗಬಾರದು ಎಂಬುದೊಂದು ಬಿಟ್ಟರೆ ಯಾವ ವಿಷಯ ಮೊದಲು ತೆಗೆದುಕೊಳ್ಳಬೇಕು, ಯಾವ ವಿಷಯ ಅನಂತರ ತೆಗೆದುಕೊಳ್ಳಬೇಕೋ ಎಂಬ ಬಗ್ಗೆ ನನ್ನ ಅಭ್ಯಂತರವೇನಿಲ್ಲ. ಏಕೆಂದರೆ ನನಗೆ ಅನೇಕ ವಿಷಯಗಳು ಬಹಳ ಸ್ಪಷ್ಟವಾಗಿ ಗೊತ್ತಿದೆ. ಮಾನ್ಯ ಸಿಂಧ್ಯಾರವರಿಗೆ ಅನೇಕ ವಿಷಯಗಳು ಗೊತ್ತಿಲ್ಲ. ಒಂದು ರೀತಿ ಮ್ಯಾಚ್ ಫಿಕ್ಸಿಂಗ್ ರೀತಿ ಆಗಿರುವುದರಿಂದ ನೀವು ಅನಿವಾರ್ಯವಾಗಿ ಹೊಂದಿಕೊಂಡು ಹೋಗಬೇಕಾಗಿದೆ, ನಿಮಗೆ ಅದು ಅನಿವಾರ್ಯ ಕೂಡ.

ಅಧ್ಯಕ್ಷರು:– ಮಾನ್ಯ ವಾಟಾಳ್‌ನಾಗರಾಜ್‌ರವರೂ ಇದಕ್ಕೆ one of the signatories ಅವರೇ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾರಲ್ಲಾ?

ಶ್ರೀ ಬಿ.ಎಸ್.ಯಡಿಯೂರಪ್ಪ:– ಅದಕ್ಕೆ ನಾನು ರೆಡಿಯಾಗಿದ್ದೇನೆ. ಮಾನ್ಯ ವಾಟಾಳ್‌ನಾಗರಾಜ್ ಬೇರೆ ನಾವ್ಯಾರೂ ಬೇರೆ ಎಂದು ಇಲ್ಲ. ನಾವೆಲ್ಲಾ ಒಟ್ಟಾಗಿಯೇ ಇದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಇಲ್ಲಿ signatory ಪ್ರಶ್ನೆಯೇ ಅಲ್ಲ. ಈ ಸದನ ನಿಯಮ ಮಾಡಿರುವ ಕಾರಣಕ್ಕಾಗಿ ತಾವು ನಿಲುವಳಿ ಸೂಚನೆ ತೆಗೆದುಕೊಳ್ಳದೆ ಬೇರೆಯದನ್ನು ಚರ್ಚೆ ಮಾಡಲು ದಯಮಾಡಿ ಅವಕಾಶ ಮಾಡಬೇಡಿ. ಯಡಿಯೂರಪ್ಪನವರ ರೀತಿಯೇ ನಮಗೂ ಬೆನ್ನಿಹಿನ್ ಬಗ್ಗೆ ಮಾತನಾಡಲು ಆಸಕ್ತಿ ಇದೆ, ಆದರೆ ನಮ್ಮಿಂದಾಗಿ ಈ ಸದನದಲ್ಲಿ ಕೆಟ್ಟ ಸಂಪ್ರದಾಯ ಆರಂಭವಾಗಕೂಡದು. ಕುಡಿಯುವ ನೀರಿನ ಬಗ್ಗೆ ನಿಲುವಳಿ ಸೂಚನೆಯದನ್ನೇ ಮೊದಲು ತೆಗೆದುಕೊಳ್ಳಬೇಕೆಂದು ನಾವು ಹೇಳುತ್ತಿದ್ದೇವೆ.

ಅಧ್ಯಕ್ಷರು:– ಐದು ಗಂಟೆಯವರೆಗೆ ಕುಡಿಯುವ ನೀರಿನ ಬಗ್ಗೆ ಮಾತನಾಡಿ ಅನಂತರ ಇದರ ಬಗ್ಗೆ ಪ್ರಾರಂಭ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆಗಲಿ, ಅದನ್ನು ಒಪ್ಪಿಕೊಂಡಿದ್ದೇವೆ.

ಅಧ್ಯಕ್ಷರು: ನಾಲ್ಕೂವರೆಯವರೆಗೆ ನಿಲುವಳಿ ಸೂಚನೆಯನ್ನು ಮಾಡೋಣ. ಅನಂತರ ತಮ್ಮ ವಿಚಾರವನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆಗಲಿ, ಅದರಂತೆ ಮಾಡೋಣ, ನಾಳೆ ನಾಲ್ಕೂವರೆಯ ಮೇಲೆ ಇದನ್ನು ಮುಂದುವರೆಸೋಣ.

ಶ್ರೀ ಎಂ.ಪಿ. ಪ್ರಕಾಶ್:– ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ತಮಗೆ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಮುಕ್ತ ಮನಸ್ಸಿನಲ್ಲಿದೆ, ಆ ರೀತಿ

ಚರ್ಚೆಯಾಗಬಹುದು ಎಂದು ಮಾನ್ಯ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು ಅಭಿಪ್ರಾಯ ಪಟ್ಟಿದ್ದಾರೆ. ಅದನ್ನು ತಾವು ನಿಲುವಳಿ ಸೂಚನೆಯ ರೂಪದಲ್ಲಾದರೂ ತಾವು ಸ್ವೀಕಾರ ಮಾಡಬಹುದು, ಅಥವಾ ಬೇರೊಂದು ರೂಪದಲ್ಲಿ ನಿಯಮಾವಳಿಯ ಪ್ರಕಾರ ತಾವು ಅವರಿಗೆ ಅವಕಾಶ ಕೊಡಬಹುದು. ನಾವು ಚರ್ಚೆಗೆ ತಯಾರಿದ್ದೇವೆ. ನಿಮ್ಮ ಮನವನ್ನು ಒಲಿಸಿ ಅದನ್ನು ತೆಗೆದುಕೊಳ್ಳಬೇಕಾದ್ದಿಲ್ಲ, ಈಗಲೇ straightway ಪ್ರಾರಂಭ ಮಾಡಲಿ. ಅದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ, ಸರ್ಕಾರದ ಪರವಾಗಿ ಅವರಿಗೆ ಉತ್ತರ ಕೊಡಲು ತಯಾರಿದ್ದೇವೆ. ಆ ರೂಪದಲ್ಲಾದರೂ ತೆಗೆದುಕೊಳ್ಳಿ, ಅಥವಾ ಬೇರೆ ರೂಪದಲ್ಲಾದರೂ ತೆಗೆದುಕೊಳ್ಳಲಿ.

ಅಧ್ಯಕ್ಷರು:– ಯಾವ ರೂಪದಲ್ಲಾದರೂ ಇದನ್ನು ತೆಗೆದುಕೊಳ್ಳಬಹುದು ಎಂದು ಸರ್ಕಾರ ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ಇದರ ಬಗ್ಗೆ ಚರ್ಚೆ start ಮಾಡಿ. ಇದಕ್ಕೆ ನಾನು one hour ನಿಗದಿ ಮಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಾರ್, ಇಲ್ಲಿ ನಡೆದಿರುವ ಪದ್ಧತಿ ಏನೆಂದರೆ, ಅಂತಿಮವಾಗಿ ಅದು ತಮಗೆ ಬಿಟ್ಟದ್ದು. ಇದನ್ನು ಕನ್‌ವರ್ಟ್ ಮಾಡುತ್ತೀರೋ, ಏನೋ ಎಂಬ ಬಗ್ಗೆ ತಾವು ಆಮೇಲೆ ಹೇಳಿ. ತಾವು ಪ್ರಾರಂಭದಲ್ಲೇ ಹೇಳಿ ಇದರ ಮಹತ್ವವನ್ನು ಕಡಿಮೆ ಮಾಡಬೇಡಿ. ಚರ್ಚೆಯಲ್ಲಾ ಆದ ಮೇಲೆ ತಾವು ಹೇಳಿ. ಇಡೀ ಸದನದಲ್ಲಿ ಇದರ ಬಗ್ಗೆ ಬಹಳ ಜನ ಸದಸ್ಯರು ಮಾತನಾಡಬೇಕೆಂದಿದ್ದಾರೆ. ಯಾವ ನಿಯಮಾವಳಿಯಲ್ಲಿ ಚರ್ಚೆಯಾಗಬೇಕು ಅದಕ್ಕೆ ಎಷ್ಟು ಸಮಯ ಕೊಡಬೇಕು ಎಂದು ತಾವು ನಂತರ ಹೇಳುವಿರಂತೆ. ನಿಮ್ಮ ಮಾತಿಗೆ ನಾನು ಬೆಲೆ ಕೊಡುತ್ತೇನೆ. ಈಗ ಚರ್ಚೆ ಪ್ರಾರಂಭ ಮಾಡುತ್ತೇನೆ.

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೇ, ಇದರಲ್ಲಿ ಬೇರೆ ಬೇರೆ issues ಬರುತ್ತವೆ. ಆದ್ದರಿಂದ ಒಂದು ಗಂಟೆಯೊಳಗಾಗಿ ಮುಗಿಸೋಣ. ಅವರು direct ಆಗಿ `let them start' ಎನ್ನುತ್ತಿದ್ದಾರಲ್ಲಾ

8. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ರಾಜ್ಯದಲ್ಲಿನ ಕುಡಿಯುವ ನೀರಿನ ಸಮಸ್ಯೆ ಕುರಿತು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಇವತ್ತು ತಮ್ಮ ಮುಂದೆ ರಾಜ್ಯದ ಹಲವಾರು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಹಾಹಾಕಾರದ ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತಿರುವಾಗ ಮೊದಲನೇ ಬೆಂಚ್‌ನಲ್ಲೇ, ಮೊದಲನೇ ದಿವಸವೇ, ಸರ್ಕಾರದ ಹೈಯರ್ ಅಧಿಕಾರಿಗಳಿಗೆ ಸದನದಲ್ಲಿ ಹಾಜರಾಗಲು ಏನು ರೋಗ ಬಂದಿದೆ? ಅವರು ಏನು ವ್ಯವಹಾರ ಮಾಡುವುದಕ್ಕೆಂದು ಹೋಗಿದ್ದಾರೆ? ಸಾರ್, ಇಲ್ಲಿರುವಂತಹ ಪದ್ಧತಿಗಳನ್ನೆಲ್ಲಾ ಇವರು ಹಾಳು ಮಾಡಿ ಬಿಟ್ಟಿದ್ದಾರೆ. ಈ ಸರ್ಕಾರ ಬಂದಮೇಲೆ ಅಧಿಕಾರಿಗಳೇ ಆಡಳಿತವನ್ನು ನಡೆಸುತ್ತಿದ್ದಾರೆ, ವಿಧಾನ ಸೌಧದ ಮೂರನೇ ಮಹಡಿಯಲ್ಲಿ ಅವರು ಕುಳಿತಿದ್ದಾರೇನು? ಅವರು ಮಾನ್ಯ ಮುಖ್ಯಮಂತ್ರಿಗಳ ಕೆಲಸವನ್ನು ಮಾಡುತ್ತಿದ್ದಾರೆಯೇ? ಇದು ಮಹತ್ವವಾದಂತಹ ಚರ್ಚೆಯಲ್ಲವೇ? ಇವರಂತೂ ಒಂದು ದಿನವೂ ಎಲ್ಲಿಯೂ ಭೇಟಿ ನೀಡಿಲ್ಲ. ರಾಜ್ಯಾದ್ಯಂತ ಕುಡಿಯುವ ನೀರಿನ ಪರಿಸ್ಥಿತಿ ಏನಾಗಿದೆ ಎಂದು ಹೋಗಿ ನೋಡಲು ಇವರಿಗೆ ಪುರುಸೊತ್ತಿಲ್ಲ. ಅಧಿಕಾರಿಗಳಾದವರು ರಾಜಕೀಯ ಮಾಡಿಕೊಂಡು ಕುಳಿತಿರುತ್ತಾರೆ. ಚುನಾಯಿತ ಪ್ರತಿನಿಧಿಗಳಿಗೂ ಕೂಡ ಗೌರವ ಇಲ್ಲ, ನಿಮ್ಮ ಕರ್ತವ್ಯವನ್ನೂ ಸಹ ಮಾಡುವುದಿಲ್ಲ, ಮಂತ್ರಿಗಳನ್ನು ಅಡ್ಡದಾರಿಗೆ ಹಿಡಿಸುತ್ತೀರಿ, ಸರ್ಕಾರವನ್ನು